ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ31-07-2025 ರಂದು ಬೋಧಿಸಲಾಯಿತು.

ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಎ ಜಿ ಪಿ ರವರಿಂದಃ

ದಾವಾ ಸರ್ವೆ ನಂ 245 ರ ವಿಸ್ತೀರ್ಣ 39 ಗುಂಟೆ ಇದ್ದು ಅದರಲ್ಲಿ 6 ಗುಂಟೆ ಖರಾಬ್ ಇರುತ್ತದೆ. ದಾವಾಸ್ತಿಯಲ್ಲಿ ಮನೆಯನ್ನು ಯಾರು ಕಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯ ಕಾಲದಿಂದಲೂ ಸದರಿ ಮನೆ ಇರುತ್ತದೆ ಎಂದು ಸಾಕ್ಷ್ಯನುಡಿಯುತ್ತಾರೆ. ದಾವಾ ಸರ್ವೆ ನಂಬರ ಕೃಷಿ ಆಸ್ತಿ ಅಗಿರುತ್ತದೆ ಎಂದರೆ ಸರಿ. ದಾವಾಸ್ತಿಯಲ್ಲಿ ಇದ್ದ Form house ಕಟ್ಟಲು ಸಂಬಂದಪಟ್ಟ ಇಲಾಖೆಯಿಂದ ಪೂರ್ವಾನುಮತಿ ಪಡೆದಿರುತ್ತಾರೊ ಇಲ್ಲವೊ ನನಗೆ ಗೊತ್ತಿಲ್ಲ.

2. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಪ್ಯಾರಾ ನಂ 4 ರಲ್ಲಿ ದಾವಾ Form house ನ್ನು ನನ್ನ ಹಾಗೂ ನನ್ನ ಕುಟುಂಬದ ವಾಸ್ತವ್ಯಕ್ಕೆ ಹಾಗೂ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಲು ಮತ್ತು ಕೃಷಿ ಉಪಕರಣಗಳನ್ನು ಇಟ್ಟುಕೊಳ್ಳಲು ಉಪಯೋಗಿಸುತ್ತೇವೆ ಎಂದರೆ ಸರಿ. ನಾನು ಮತ್ತು ನನ್ನ ಕುಟುಂಬದವರು ಈಗಲೂ ಸಹ ದಾವಾ Form house ನಲ್ಲಿಯೇ ವಾಸವಿರುತ್ತೇವೆ. ನಾನು ಮತ್ತು ನನ್ನ ಕುಟುಂಬದವರು ಈಗಲೂ ಸಹ ದಾವಾ Form house ನಲ್ಲಿಯೇ ವಾಸವಿರುತ್ತೇವೆ ಎಂದು ತೋರಿಸಲು ಯಾವುದೇ ಭಾವಚಿತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಗಳಲ್ಲಿ ನಾನು ದಾವಾ Form house ವಾಸವಿರುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ-22 ರಿಂದ 26 ಭಾವಚಿತ್ರಗಳಲ್ಲಿ ನಾನು ಮತ್ತು ನಮ್ಮ ಕುಟುಂಬದವರು ವಾಸವಿರುವ ಬಗ್ಗೆ ತೋರಿಸಿಲ್ಲ. ಸಾಕ್ಷಿಯು ಮುಂದುವರೆದು ದಾವಾ Form house ನಲ್ಲಿ ನಾನು ಮತ್ತು ನನ್ನ ಕುಟುಂಬದವರು ವಾಸವಿರುತ್ತೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ Form house ನಲ್ಲಿ ನಾನು ಮತ್ತು ನನ್ನ ಕುಟುಂಬದವರು ವಾಸವಿಲ್ಲದೇ ಇದ್ದರೂ ಸಹ ವಾಸವಿರುತ್ತೇವೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

3. ನಮ್ಮ ಕುಟುಂಬದಲ್ಲಿ 1997 ರಲ್ಲಿ ವಿಭಾಗ ಆಗಿದ್ದು, ಸದರಿ ವಿಭಾಗದಲ್ಲಿ ದಾವಾಸ್ತಿ ಮತ್ತು Form house ನನ್ನ ಭಾಗಕ್ಕೆ ಬಂದಿರುತ್ತದೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.



4. ನಿ.ಪಿ-7 ರ ದಾಖಲೆಯಲ್ಲಿ 5 ರಿಂದ 10 ನೇ ಪ್ರತಿವಾದಿಗಳು ಸದರಿ ದಾವಾಸ್ತಿಗೆ ಸಬಂದಿಸಿದಂತೆ ತಕರಾರು ಸಲ್ಲಿಸಿದ ಬಗ್ಗೆ ನಮೂದಿಸಲಾಗಿದೆ ಎಂದರೆ ಸರಿಯಲ್ಲ.

5. ಸಾಮಾನ್ಯವಾಗಿ ಕೃಷಿ ಜಮೀನಿನಲ್ಲಿ Form House ಮಾಡಿದರೆ ಕೃಷಿ ಉತ್ಪನ ಮತ್ತು ಕೃಷಿ ಉಪಕರಣ ಇಡಲು ಮಾತ್ರ ಉಪಯೋಗಿಸಬೇಕು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕೃಷಿ ಜಮೀನಿನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಸುವ ಪೂರ್ವದಲ್ಲಿ ಸಂಬಂದಪಟ್ಟ ಎ ಪಿ ಅಥವಾ ಡಿಸಿ ರವರಿಂದ ಅನುಮತಿ ಪಡೆಯ ಬೇಕಾಗುತ್ತದೆ ಎಂದರೆ ಸರಿಯಲ್ಲ.

6. ದಾವಾಸ್ತಿಯಲ್ಲಿ Form house ನಿರ್ಮಿಸುವ ಪೂರ್ವದಲ್ಲಿ ಸಂಬಂದಪಟ್ಟ ಇಲಾಖೆಯಿಂದ ಪೂರ್ವನುಮತಿ ಪಡೆದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿರುವ Form House ರಿಪೇರಿಗೆ ಸಂಬಂದಿಸಿದಂತೆ ಸಂಬಂದಪಟ್ಟ ಇಲಾಖೆಯಿಂದ ನಿಗದಿತ ಶುಲ್ಕವನ್ನು ಪಾವತಿ ಮಾಡಿ ಪೂರ್ವನುಮತಿ ಪಡೆದಿಲ್ಲ ಎಂದರೆ ಸರಿಯಲ್ಲ.

7. ನಿ.ಪಿ–11 ಮತ್ತು 12 ರಂತೆ 3 ಮತ್ತು 4 ನೇ ಪ್ರತಿವಾದಿಗಳು ಈ ದಾವೆಯಲ್ಲಿ ನನಗೆ ನೋಟೀಸ ನೀಡಿರುತ್ತಾರೆ ಎಂದರೆ ಸರಿ.

8. ದಾವಾಸ್ತಿಯಲ್ಲಿರುವ Form house ಗೆ ಸಂಬಂದಿಸಿದಂತೆ ರಿಪೇರಿ ಮಾಡಲು ಪೂರ್ವಾನುಮತಿ ಪಡೆಯದೇ ಸರ್ಕಾರಿ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡದೇ ದಾವಾಸ್ತಿಯಲ್ಲಿ Form house ನ್ನು ಕಾನೂನು ವಿರುದ್ದವಾಗಿ ರಿಪೇರಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 1 ರಿಂದ 3 ನೇ ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 4 ನೇ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**